**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 32/2023**

| | | |
|---|---|---|
| ಹೆಸರು | ಪತ್ರೇಶ್ | PW -1 |
| ತಂದೆಯ ಹೆಸರು | ಪಟ್ಟದಯ್ಯ | CW -1 |
| ವಯಸ್ಸು | 63 ವರ್ಷ | |
| ಉದ್ಯೋಗ | ನಿವೃತ್ತ ಶಿಕ್ಷಕ | ದಿನಾಂಕಃ 27-03-2025 |
| ವಾಸ | ಅರಸೀಕೆರೆ ಗ್ರಾಮ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 4 ರಿಂದ 6 ರವರ ಪರಿಚಯ ಇದೆ. ನಾನು ಕೊಂಡಜ್ಜಿ ಗ್ರಾಮದಲ್ಲಿ ಇರುವ ಸರ್ಕಾರಿ ಪದವೀಪೂರ್ವ ಕಾಲೇಜಿನ ಹಿರಿಯ ಸಹಾಯ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 31.05.2021 ರಂದು ಸರ್ಕಾರದಿಂದ ಮಧ್ಯಾಹ್ನದ ಬಿಸಿಊಟ ಯೋಜನೆಯಡಿಯಲ್ಲಿ ಅಕ್ಕಿ ಬೇಳೆ ಮತ್ತು ಎಣ್ಣೆ ಸರಬರಾಜು ಆಗಿತ್ತು. ದಿನಾಂಕ 01.06.2021 ರಂದು 102 ಮಕ್ಕಳಿಗೆ ಅದನ್ನು ವಿತರಣೆ ಮಾಡಿ ಉಳಿದ ಸಾಮಗ್ರಿಯನ್ನು ಕೊಠಡಿಯಲ್ಲಿ ಇಟ್ಟಿದ್ದೆವು. ಮಾರನೇ ದಿನ ಬೆಳಿಗ್ಗೆ 10.00 ಗಂಟೆಗೆ ಸಮಯದಲ್ಲಿ ಮುಖ್ಯ ಅಡುಗೆ ಸಹಾಯಕರಾದ ಚಾಸಾ 4 ರವರಿಗೆ ಬೀಗವನ್ನು ಕೊಟ್ಟು ಕಳುಹಿಸಿದ್ದು, ಅವರು ಸದರಿ ಕೊಠಡಿ ಬೀಗವನ್ನು ತೆಗೆದು ನೋಡಿದಾಗ ಸದರಿ ಕೊಠಡಿಯ ಕಿಟಕಿಯ ಗಾಜು ಒಡೆದು ಎಣ್ಣೆ ಪಾಕೇಟ್ ಗಳು ಇಲ್ಲದಿರುವುದನ್ನು ನೋಡಿ ನನಗೆ ಬಂದು ತಿಳಿಸಿರುತ್ತಾರೆ. ನಂತರ ನಾನು ಸದರಿ ಕೊಠಡಿಗೆ ಹೋಗಿ ನೋಡಿದಾಗ ಅಲ್ಲಿ ಮೂರು ಬಾಕ್ಸಗಳಲ್ಲಿ ಇದ್ದ ತಾಲಾ 10 ರಂತೆ ಇದ್ದ 30 ಎಣ್ಣೆ ಪ್ಯಾಕೇಟ್ ಗಳು ಕಳ್ಳತನವಾಗಿರುವುದು ಕಂಡುಬಂದಿರುತ್ತದೆ. ಸದರಿ ಎಣ್ಣೆ ಪಾಮ್ ಆಯಿಲ್ ಆಗಿರುತ್ತದೆ. ನಂತರ ನನ್ನ ಮೇಲಾಧಿಕಾರಿಗಳಿಗೆ ಸದರಿ ವಿಚಾರದ ಬಗ್ಗೆ ವರದಿ ಮಾಡಿರುತ್ತೇನೆ. ನಂತರ ಅವರು ನಿರ್ದೇಶನದಂತೆ ಠಾಣೆಗೆ ಹೋಗಿ ದಿನಾಂಕ 11.06.2021 ರಂದು ಲಿಖಿತ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರನ್ನು ಸಾಕ್ಷಿಯು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಠಾಣೆಗೆ ಕರೆಯಿಸಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಆ ಕಾಲಕ್ಕೆ ಕಳ್ಳತನ ಮಾಡಿದ ಆರೋಪಿಗಳು ಸಿಕ್ಕಿರುತ್ತಾರೆ ಎಂದು ಪೊಲೀಸರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

ನಿಪಿ 1 ದೂರನ್ನು ನಾನೇ ಸ್ವತಃ ಬರೆದು ಸಲ್ಲಿಸಿರುತ್ತೇನೆ. ನಮ್ಮ ಶಾಲೆಗೆ ಸರ್ಕಾರದಿಂದ ಎಷ್ಟು ಪ್ರಮಾಣದ ಸಾಮಗ್ರಿಗಳು ಸರಬರಾಜು ಆಗುತ್ತವೆ ಎಂದು ಪಟ್ಟಿ ಇರುತ್ತದೆ ಎಂದರೆ ಸರಿ. ಸದರಿ ಪಟ್ಟಿಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ನಿಪಿ 1 ದೂರಿನಲ್ಲಿ ಎಷ್ಟು ಸಾಮರ್ಥ್ಯದ ಮತ್ತು ಯಾವ ಕಂಪನಿಯ ಎಣ್ಣೆ ಪ್ಯಾಕೇಟ್ ಗಳು ಕಳ್ಳತನವಾಗಿವೆ ಎಂದು ತಿಳಿಸಿಲ್ಲ ಎಂದರೆ ಸರಿ. ನಿಪಿ 1

ದೂರಿನಲ್ಲಿ ಸದರಿ ವಿಚಾರವನ್ನು ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ 1 ದೂರಿನಲ್ಲಿ ಎಷ್ಟು ಪ್ರಮಾಣದ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದ್ದೆವು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ವಿತರಣೆ ಮಾಡಿದ ಬಗ್ಗೆ ಪಟ್ಟಿ ಇರುತ್ತದೆ ಎಂದರೆ ಸರಿ. ಸದರಿ ಪಟ್ಟಿಯನ್ನು ಸಹ ಪೊಲೀಸರಿಗೆ ನೀಡಿಲ್ಲ ಎಂದರೆ ಸರಿ. ಕಳ್ಳತನವಾದ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿದರ ಬಗ್ಗೆ, ನಿಪಿ 1 ರಲ್ಲಿ ಯಾವ ರೀತಿ ತಿಳಿಸಿರುತ್ತೇನೆ ಎಂದು ನಮೂದು ಇಲ್ಲ ಎಂದರೆ ಸರಿ. ಎಷ್ಟು ಕಿಟಕಿಯ ಗಾಜುಗಳು ಒಡೆದಿದ್ದವು ಎಂದು ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಕಿಟಕಿ ಗಾಜು ಒಡೆದ ಬಗ್ಗೆ ತಕ್ಷಣದಲ್ಲಿ ಛಾಯಾಚಿತ್ರ ತೆಗೆದಿಲ್ಲ ಎಂದರೆ ಸರಿ. ನನ್ನ ಮೇಲಾಧಿಕಾರಿಗಳು ದೂರವಾಣಿ ಕರೆ ಮೂಲಕ ನಿರ್ದೇಶನ ನೀಡಿರುತ್ತಾರೆ. ಸದರಿ ದೂರವಾಣಿ ಸಂಖ್ಯೆಯನ್ನು ನಿಪಿ 1 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ಮೇಲಾಧಿಕಾರಿಗಳು ದಿನಾಂಕ 02.06.2021 ರಂದು ನಿರ್ದೇಶನ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಮ್ಮ ಶಾಲೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಶಾಲೆಯಲ್ಲಿಯೇ ಸದರಿ ಸಾಮಗ್ರಿಗಳನ್ನು ದುರಪಯೋಗ ಪಡಿಸಿಕೊಂಡಿದ್ದರೂ ಸಹ ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಆರೋಪಿತರು ಸಿಕ್ಕ ಬಗ್ಗೆ ಹೇಳಿದ ದಿನಾಂಕವನ್ನು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಅದೇ ರೀತಿ ಪೊಲೀಸರು ಆರೋಪಿತರ ಹೆಸರು ವಿಳಾಸ ಹೇಳಿರುವುದಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ** 2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲವನ್ನು ಅಳವಡಿಸಿಕೊಳ್ಳಲು ಪ್ರಾರ್ಥಿಸಿದ್ದು, ಅಳವಡಿಸಿಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.